**<u>ದಿನಾಂಕಃ 09-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ವಿ. ವಕೀಲರಿಂದಃ</u>

ವಾದಿಯು ನೀಡಿದ ಸೂಚನಾವಳಿಯಲ್ಲಿನ ದಾಖಲೆಗಳನ್ನು ನಾನು ಪಡೆದುಕೊಂಡು ನಿಯೋಗಿ ಕಾರ್ಯಕ್ಕೆ ಹೋಗಿರುತ್ತೇನೆ ಎಂದರೆ ಸರಿ. ನಾನು ನಿಯೋಗಿ ಕಾರ್ಯಕ್ಕೆ ಹೋದ ಸಂದರ್ಭದಲ್ಲಿ ದಾವಾ ಸ್ವತ್ತುಗಳನ್ನು ಪರಿಶೀಲನೆ ಮಾಡಿರುತ್ತೇನೆ. ವಾದಿಯು ನೀಡಿದ ಸೂಚನಾವಳಿ ಮತ್ತು ನಾನು ತೆಗೆದುಕೊಂಡು ಹೋದ ದಾಖಲೆಗಳಲ್ಲಿ ಎರಡು ನಕಾಶೆಗಳು ಪೂರಕವಾಗುವಂತೆ ಕಂಡುಬಂದಿದ್ದು, ಆದರೆ ಉಳಿದವು ನಿವೇದನೆಗಳು ಇದ್ದವು ಎಂದು ಉತ್ತರಿಸಿರುತ್ತಾರೆ. ನಾನು ನಿಯೋಗಿ ಕಾರ್ಯಕ್ಕೆ ಸಮಯದಲ್ಲಿ ಪ್ರತಿವಾದಿ ಮನೆಗೆ ಸಂಬಂಧಿಸಿದ ಪಂಚಾಯಿತಿ ದಾಖಲೆಯನ್ನು ತೆಗೆದಕೊಂಡು ಹೋಗಿರುವುದಿಲ್ಲ. ಪ್ರತಿವಾದಿಯ ಮನೆ ಮತ್ತು ಖಾಲಿ ಜಾಗ 18 ಗುಂಟೆ ಬರುವ ಸಂಬಂಧ ನಮ್ಮ ಕಚೇರಿಯಲ್ಲಿ ಯಾವುದೇ ದಾಖಲೆ ಇರಲಿಲ್ಲ. ಸಾಕ್ಷಿ ಮುಂದುವರೆದು ಸೂಚನಾವಳಿಯಲ್ಲಿ ಅದರ ಬಗ್ಗೆ ಕೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2. ಪ್ರತಿವಾದಿ ಮನೆ ಮತ್ತು ಜಾಗಕ್ಕೆ ಸಂಬಂಧಪಟ್ಟಂತೆ 18 ಗುಂಟೆ ಇರುವ ಬಗ್ಗೆ ವಾದಿ ನೀಡಿದ ಸೂಚನಾವಳಿ ಕ್ರ.ಸಂಃ29 ರ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಪ್ರತಿವಾದಿಯವರಿಗೆ 18 ಗುಂಟೆ ಜಾಗ ಇರುವ ಬಗ್ಗೆ ಅವರ ಕಡೆಯಿಂದ ದಾಖಲೆ ಪಡೆದು ಸರ್ವೆ ಮಾಡಿರುವುದಿಲ್ಲ. ಆದರೆ ಅನುಭವದ ಆಧಾರದ ಮೇಲೆ ಅಳತೆ ಮಾಡಿರುತ್ತೇನೆ. ಪ್ರತಿವಾದಿಯವರ ಅನುಭವದಲ್ಲಿ 18 ಗುಂಟೆ ಇರುತ್ತದೆ ಎಂಬ ಬಗ್ಗೆ ನಾನು ಅಕ್ಕಪಕ್ಕದವರನ್ನು ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ವಾದಿ ಪರ ಸೂಚನಾವಳಿಯಲ್ಲಿ ಅಳತೆಯ ಕಾರ್ಯಕ್ಕೆ ವಾದಿ, ಪ್ರತಿವಾದಿ ಮತ್ತು ಅವರ ಪರ ವಕೀಲರು ಮಾತ್ರ ಇರಬೇಕು ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ನಾನು ನಿಸಿ-9 ರಲ್ಲಿ ವಾದಿಯ ಜಮೀನು ಬರುವ ಬಗ್ಗೆ ನಕಾಶೆಯಲ್ಲಿ ತೋರಿಸಿರುತ್ತೇನೆ. ನಿಸಿ-9 ರಲ್ಲಿ ಹಸಿರು ಬಣ್ಣದಿಂದ ತೋರಿಸಿರುವ ಸರ್ವೇ ನಂಬರ್ 222 ಪ್ರತಿವಾದಿಯ ಸ್ವಾಧೀನದಲ್ಲಿರುವ ಜಾಗ

ಇರುತ್ತದೆ. ವಾದಿಗೆ ಸ.ನಂ.222 ರಲ್ಲಿ 15 ಗುಂಟೆ ಹಾಗೂ ಸ.ನಂ.157 ರಲ್ಲಿ 2 ಎಕ್ರೆ 25 ಗುಂಟೆ ಜಮೀನು ಇರುತ್ತದೆ. ಈ ರೀತಿ ಇಷ್ಟು ವಿಸ್ತೀರ್ಣದಲ್ಲಿ ವಾದಿ ಜಮೀನು ಇರುತ್ತದೆ ಎಂಬ ಬಗ್ಗೆ ನಕಾಶೆಯಲ್ಲಿ ತೋರಿಸಿರುವುದಿಲ್ಲ.

3. ಸ.ನಂ.222 ರಲ್ಲಿ ಪ್ರತಿವಾದಿಯರ ಸ್ವಾಧೀನದಲ್ಲಿ 5 ಎಕ್ರೆ ಜಮೀನು ಇರುತ್ತದೆ. ಸದರಿ 5 ಎಕ್ರೆ ಜಾಗ ಇರುವ ಬಗ್ಗೆ ನಿಸಿ-9 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಸರ್ವೆ ಕಾರ್ಯವನ್ನು ಚೈನು ಮತ್ತು ಜಿ.ಪಿ.ಎಸ್. ಮುಖಾಂತರ ಮಾಡಿರುತ್ತೇನೆ. ನಾನು ಸರ್ವೆ ಕಾರ್ಯವನ್ನು ಚೈನು ಮತ್ತು ಜಿ.ಪಿ.ಎಸ್. ಮುಖಾಂತರ ಮಾಡಿರುವ ಬಗ್ಗೆ ನನ್ನ ವರದಿ ಹಾಗೂ ನಕಾಶೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ಸ್ದಳದಲ್ಲಿ ನಿಸಿ-9 ಅನ್ನು ತಯಾರಿಸಿರುವುದಿಲ್ಲ ಎಂದರೆ ಸರಿ. ನಾನು ಸ್ದಳದಲ್ಲಿ ಕಚ್ಚಾ ಬರವಣಿಗೆ ಮತ್ತು ನಕಾಶೆಯನ್ನು ಮಾಡಿರುತ್ತೇನೆ. ನಾನು ಸದರಿ ಸ್ಥಳದಲ್ಲಿ ಕಚ್ಚಾ ಬರವಣಿಗೆ ಮತ್ತು ನಕಾಶೆ ತಯಾರಿಸಿದ ಬಗ್ಗೆ ಪಕ್ಷಗಾರರ ಸಹಿ ಪಡೆದಿರುವುದಿಲ್ಲ ಮತ್ತು ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ನಿಪಿ-89 ರ ಮೂಲ ದಾಖಲೆಯನ್ನು ಸರ್ವೆ ಕಾಲಕ್ಕೆ ತೆಗೆದುಕೊಂಡು ಹೋಗಿರುವುದಿಲ್ಲ ಆದರೆ ಅದರ ಜೆರಾಕ್ಸ್ ಪ್ರತಿಯನ್ನು ನ್ಯಾಯಾಲಯದಿಂದ ತೆಗೆದುಕೊಂಡು ಹೋಗಿರುತ್ತೇನೆ ಎಂದು ನುಡಿದಿರುತಾರೆ.

4. ವಾದಿ ಕೊಟ್ಟ ಸೂಚನಾವಳಿಯಲ್ಲಿ ನಿಪಿ-89 ರ ಮೂಲ ದಾಖಲೆಯನ್ನು ತೆಗೆದುಕೊಂಡು ಹೋಗುವಂತೆ ಹೇಳಿದ್ದರು ಎಂದರೆ ಸರಿ. ನಿಪಿ-89 ರಲ್ಲಿ ಸ.ನಂ.222 ಯಲ್ಲಿರುವ ವಾದಿಯ ಸ್ವತ್ತಿಗೆ ರಸ್ತೆ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಆ ರೀತಿ ನಿರ್ಧಾರ ಮಾಡಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-89 ರಲ್ಲಿ ಮೂರು ರಸ್ತೆಗಳನ್ನು ತೋರಿಸಿದ್ದು, ಆದರೆ ವಾಸ್ತವದಲ್ಲಿ ಒಂದು ರಸ್ತೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ-89 ಹಾಗೂ ನಿಸಿ-9 ರಲ್ಲಿ ವ್ಯತ್ಯಾಸ ಕಂಡುಬಂದಿರುವ ಬಗ್ಗೆ ನನ್ನ ವರದಿಯಲ್ಲಿ ಮತ್ತು ವಾದಿ ನೀಡಿದ ಸೂಚನಾವಳಿಗೆ ನೀಡಿದ ಉತ್ತರದಲ್ಲಿ ತಿಳಿಸಿಲ್ಲ ಎಂದರೆ ಸರಿ. ನಿಪಿ-89 ಅನ್ನು ನಮ್ಮ ಸರ್ವೆ ಇಲಾಖೆಯವರು ನೀಡಿರುತ್ತಾರೆ ಎಂದರೆ ಸರಿ.

5. ನಾನು ಪ್ರತಿವಾದಿಗೆ ತಮ್ಮ ಮನೆ ಮತ್ತು ಕಣದ ಜಾಗದಲ್ಲಿ ಎಷ್ಟು ವರ್ಷದಿಂದ ಅನುಭೋಗದಲ್ಲಿ ಇರುತ್ತಾರೆ ಎಂಬ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ನಿಪಿ-89 ರಲ್ಲಿ 25 ಗುಂಟೆ ಪ್ರತಿವಾದಿಯರ ಅನುಭವದಲ್ಲಿ ಮನೆ, ಕಣ, ಗೊಬ್ಬರದಗುಂಡಿ, ದನದ ಕೊಟ್ಟಿಗೆ

ಎಂದು ನಮೂದಿಸಿರುತ್ತದೆ. ನಾನು ನಿಯೋಗಿ ಕಾರ್ಯ ಮಾಡುವ ಕಾಲಕ್ಕೆ ಗೊಬ್ಬರದ ಗುಂಡಿ, ದನದ ಕೊಟ್ಟಿಗೆಯ ಬಗ್ಗೆ ಪರಿಶೀಲನೆ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-89 ರಲ್ಲಿ ನಮೂದಿಸಿದ ವಿಸ್ತೀರ್ಣಕ್ಕೂ ಮತ್ತು ನಿಸಿ-9 ರಲ್ಲಿ ನಮೂದಿಸಿದ ವಿಸ್ತೀರ್ಣದಲ್ಲಿ ಮೂರು ಗುಂಟೆ ಕಡಿಮೆ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕಣ ಮತ್ತು ಮನೆ ಮಾತ್ರ ಅಳತೆ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ಸರ್ವೆ ಕಾಲಕ್ಕೆ ಕಂದಾಯ ಇಲಾಖೆಯಿಂದ ಪ್ರತಿವಾದಿಗೆ ಸಂಬಂಧಿಸಿದ ದಾಖಲೆಯನ್ನು ತರಿಸಿರುವುದಿಲ್ಲ ಎಂದರೆ ಸಾಕ್ಷಿ ಅದು ಸೂಚನಾವಳಿಯಲ್ಲಿ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ.

6. ನಾನು ನಿಯೋಗಿ ಕಾರ್ಯ ಮಾಡುವ ಕಾಲಕ್ಕೆ ನಿಪಿ-96 ರ ಮೂಲ ಪ್ರತಿಯನ್ನು ತೆಗೆದುಕೊಂಡು ಹೋಗಿರುವುದಿಲ್ಲ ಸಾಕ್ಷಿ ಮುಂದುವರೆದು ಜೆರಾಕ್ಸ್ ಪ್ರತಿ ತೆಗೆದುಕೊಂಡು ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಿಪಿ-96 ರಲ್ಲಿ ಹೊಸದಾಗಿ ರಸ್ತೆ ಮಾಡಿರುವ ಬಗ್ಗೆ ನಮೂದು ಇರುತ್ತದೆ. ಪ್ರತಿವಾದಿ ನಿರ್ಮಾಣ ಮಾಡಿದ ಗೇಟು ಇಡುವಳ್ಳಿ ಗ್ರಾಮದ ಸ.ನಂ.222 ರಲ್ಲಿ ಬರುತ್ತಿತ್ತು. ಪ್ರತಿವಾದಿ ನಿರ್ಮಿಸಿದ ಗೇಟು 5 ಎಕ್ರೆ ವಿಸ್ತೀರ್ಣದ ಒಳಗಡೆ ಬರುತ್ತಿತ್ತು. ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಲಾಗಿ ಗೇಟಿನಿಂದ ಸ್ವಲ್ಪ ದೂರದಲ್ಲಿ ಉಣುಗೋಲು ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-129 ಎಂದು ಗುರುತಿಸಲಾಯಿತು. ಉಣುಗೋಲು ದಾಟಿ ಮುಂದೆ ವಾದಿಯ ಜಮೀನಿಗೆ ಹೋಗುವ ರಸ್ತೆ ಕಂಡುಬರುತ್ತಿತ್ತು ಎಂದರೆ ಸರಿ. ಉಣುಗೋಲು ಮತ್ತು ಗೇಟು ಎರಡೂ ಸಹ ಪ್ರತಿವಾದಿಯರ ಸ್ವಾಧೀನದಲ್ಲಿ ಇರುವ ಬಗ್ಗೆ ನನ್ನ ವರದಿಯಲ್ಲಿ ಕಂಡುಬರುತ್ತದೆ ಎಂದರೆ ಸರಿ. ವಾದಿಯ ಜಮೀನಿಗೆ ಹೋಗಲು ಬೇರೆ ಯಾವುದೇ ರಸ್ತೆ ಕಂಡುಬಂದಿರುವುದಿಲ್ಲ ಎಂದರೆ ಸಾಕ್ಷಿ ಯಾರೂ ತೋರಿಸಿರುವುದಿಲ್ಲ ಮತ್ತು ನಾನು ನೋಡಿರುವುದಿಲ್ಲ ಮತ್ತು ಆ ರೀತಿ ರಸ್ತೆ ಇರುವ ಬಗ್ಗೆ ಗುರುತಿಸಲು ನಾನು ಪ್ರಯತ್ನಪಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

7. ಸ.ನಂ.223 ರಲ್ಲಿ ಪ್ರತಿವಾದಿಯ ಮನೆ ನಿಸಿ-9 ರಲ್ಲಿ ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ.ನಂ.222 ರಲ್ಲಿಯೂ ಸಹ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸ.ನಂ.223 ರಲ್ಲಿ ಹಸಿರು ಬಣ್ಣದಿಂದ ತೋರಿಸಿರುವ ಜಾಗ ಕಣಕ್ಕೆ

ಸಂಬಂಧಿಸಿದ್ದು ಇರುತ್ತದೆ. ಸ.ನಂ.223 ಸರ್ಕಾರಿ ಜಾಗ ಎಂದರೆ ಸರಿ. ನಿಸಿ-9 ರಲ್ಲಿ ಸರ್ವೆ. ನಂಬರ್ 222 ರಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಪ್ರತಿವಾದಿಯ ಮನೆ ಇರುತ್ತದೆ ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯ ಮನೆಯ ಮುಂಭಾಗದಿಂದ ಸುಮಾರು 10 ಮೀಟರ್ ದೂರದಲ್ಲಿ ಕಬ್ಬಿಣದ ಗೇಟು ಬರುತ್ತದೆ. ಪ್ರತಿವಾದಿಯ ಮನೆ ಎಷ್ಟು ವಿಸ್ತೀರ್ಣದಲ್ಲಿ ಇರುತ್ತದೆ ಎಂದು ಅಳತೆ ಮಾಡಿರುತ್ತೇನೆ ಆದರೆ ನಮೂದು ಮಾಡಿರುವುದಿಲ್ಲ. ನಿಸಿ-9 ರಲ್ಲಿ ವಾಸದ ಮನೆ ಸ.ನಂ.223 ರಲ್ಲಿ ಶೇಕಡಾ 80 ಪರ್ಸೆಂಟ್ ಇದ್ದು 20 ಪರ್ಸೆಂಟ್ ಸ.ನಂ.222 ರಲ್ಲಿ ಇರುತ್ತದೆ. ನಿಪಿ-99 ದಾಖಲೆಯನ್ನು ನಮ್ಮ ಇಲಾಖೆಯಿಂದ ನೀಡಲಾಗಿರುತ್ತದೆ ಎಂದರೆ ಸರಿ. ಸ.ನಂ.223 ರಲ್ಲಿ ಮುಖ್ಯ ರಸ್ತೆಯಿಂದ ಗೇಟ್ ವರೆಗೆ ಸುಮಾರು 187 ಮೀಟರ್ ದೂರ ಇರುತ್ತದೆ.

8. ನಾನು ವಾದಿಯ ಜಮೀನಿನ ಕುಡಿಯುವ ನೀರಿನ ಪೈಪ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಸರ್ಕಾರಿ ಜಾಗದಲ್ಲಿ ತೆಗೆದುಕೊಂಡು ಹೋಗಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಗೇಟು ಮತ್ತು ಉಣುಗೋಲಿನ ನಡುವೆ ಅಳವಡಿಸಿದ್ದ ಪೈಪ್ ಕಟ್ಟಾಗಿ ಮಣ್ಣನ್ನು ತುಂಬಿದ ಲಕ್ಷಣಗಳು ಕಂಡುಬಂದಿತ್ತು ಎಂದರೆ ಸಾಕ್ಷಿ ಕಣ ಮಾಡಿದ್ದರು ಎಂದು ಉತ್ತರಿಸಿರುತ್ತಾರೆ. ಸರ್ಕಾರ ಸ.ನಂಬರ್ ನಲ್ಲಿ ಹಾದುಹೋದ ಪೈಪ್ ಗಳನ್ನು ಕಟ್ ಮಾಡಿದ ಲಕ್ಷಣ ಕಂಡುಬಂದಿತ್ತು ಎಂದರೆ ಸರಿ. ಸ.ನಂ.223 ರಲ್ಲಿ ಗೇಟ್ ಅಳವಡಿಸಿರುವ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ವಾದಿಯ ಜಮೀನಿಗೆ ಹೋಗಲು ಬೇರೆ ರಸ್ತೆಯನ್ನು ತೋರಿಸಿದ್ದು ಅದು ಸ.ನಂ.150 ಬೇರೆಯವರ ಹಿಡುವಳಿ ಜಮೀನು ಇತ್ತು. ನಿಸಿ-9 ರಲ್ಲಿ PQR ಎಂದು ತೋರಿಸಿರುವ ಭಾಗದಲ್ಲಿ ಯಾವುದೇ ರಸ್ತೆ ಹಾದುಹೋದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ಸಾಕ್ಷಿ Q ಎಂಬ ಪಾಯಿಂಟ್ ನಿಂದ ಸ.ನಂ.222 ಕ್ಕೆ ಹಾದುಹೋಗಲು ಸಮೀಪದ ರಸ್ತೆ ಇರುತ್ತದೆ ಎಂದು ಉತ್ತರಿಸಿರುತಾರೆ. ನಿಸಿ-9 ರಲ್ಲಿ Q ಪಾಯಿಂಟ್ ನಿಂದ ವಾದಿಯ ಜಮೀನಿಗೆ ಹಾದುಹೋಗುವ ಬಗ್ಗೆ ಯಾವುದೇ ರಸ್ತೆ ತೋರಿಸಿಲ್ಲ ಎಂದರೆ ಸರಿ. Q ಪಾಯಿಂಟ್ ನಲ್ಲಿ ತೋರಿಸಿರುವ ಉಳಿಕೆ ಜಾಗ ಯಾರಿಗೆ ಸೇರಿದ್ದು ಎಂಬ ಬಗ್ಗೆ ನನ್ನ ವರದಿಯಲ್ಲಿ ತೋರಿಸಿಲ್ಲ ಎಂದರೆ ಸರಿ. PQR ಪಾಯಿಂಟ್ ಗಳು ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಹಾದುಹೋಗುತ್ತದೆ ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

9. ನನಗೆ PQR ಪಾಯಿಂಟ್ ನಲ್ಲಿ ರಸ್ತೆ ಇರುವ ಬಗ್ಗೆ ಪ್ರತಿವಾದಿ ತೋರಿಸಿರುತ್ತಾರೆ. ನಾನು ನಿಯೋಗಿ ಕಾರ್ಯ ಮಾಡುವ ಕಾಲಕ್ಕೆ PQR ಪಾಯಿಂಟ್ ಮೂಲಕ R ಪಾಯಿಂಟ್ ನ ವರೆಗೂ ಹೋಗಿದ್ದು ನಂತರ ಗಿಡಮರಗಳು, ಹಿಡುವಳಿ ಜಮೀನು ಮತ್ತು ವಾಸದ ಮನೆಗಳು ಇದ್ದವು ಎಂದು ಉತ್ತರಿಸಿರುತ್ತಾರೆ. ಹಿಡುವಳಿದಾರರ ಜಮೀನಿನವರನ್ನು ವಿಚಾರಿಸಿದ್ದು ಅವರು ಗೇಟ್ ನ ವರೆಗೆ ಮಾತ್ರ ರಸ್ತೆ ಇರುವುದಾಗಿ ಹೇಳಿರುತ್ತಾರೆ. ವಾಸದ ಮನೆ ಹಾಗೂ ಕಣ ಸ.ನಂ.223 ರಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡಲು ಅವರು ಜೊತೆ ಸೇರಿಕೊಂಡು ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕಾಶೆಯಲ್ಲೂ ಸಹ ವಾಸದ ಮನೆ, ಉಣುಗೋಲು ಮತ್ತು ಕಣ ಸ.ನಂ.223 ರಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ಕಚ್ಚಾ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಯೋಗಿ ಕಾರ್ಯವನ್ನು ಸರಿಯಾಗಿ ನಿರ್ವಹಿಸದೇ ಸುಳ್ಳು ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಹೆಚ್.ಎಸ್.ಕೆ. ವಕೀಲರಿಂದಃ</u>

ಶಾನುವಳ್ಳಿ, ಕಾವಡೆ ರಸ್ತೆಯ ಎ ಬಿಂದುವಿನಿಂದ ಸರ್ವೆ ನಂಬರ್ 137 ಮತ್ತು ಸರ್ಕಾರಿ ಸ.ನಂ.223 ರಲ್ಲಿ ರಸ್ತೆ ಕಂಡುಬರುತ್ತದೆ. ಸದರಿ ರಸ್ತೆ ಪ್ರತಿವಾದಿಯ ಸ್ವಾಧೀನದಲ್ಲಿರುವ ಜಮೀನಿಗೆ ಹೋಗಿ ನಿಲ್ಲುತ್ತದೆ. ಸದರಿ ರಸ್ತೆ ಗೇಟ್ ನ ಬಿ ಪಾಯಿಂಟ್ ವರೆಗೆ ಪ್ರತಿವಾದಿಗೆ ಸೇರಿದ ಜಾಗದಲ್ಲಿ ಬರುತ್ತದೆ. ನಿಸಿ-9 ರಲ್ಲಿ ತೋರಿಸಿರುವ ಎ ಪಾಯಿಂಟ್ ನಿಂದ ಬಿ ಪಾಯಿಂಟ್ ವರೆಗೆ 150 ಮೀಟರ್ ಉದ್ದ ಇರುತ್ತದೆ. 150 ಮೀಟರ್ ಉದ್ದ ಇರುವ ರಸ್ತೆ ಮಾತ್ರ ಸರ್ಕಾರಿ ರಸ್ತೆ ಎಂದರೆ ಸರಿ. ಸದರಿ ಎ ಯಿಂದ ಬಿ ಪಾಯಿಂಟ್ ಮಧ್ಯದಲ್ಲಿ ಯಾರು ರಸ್ತೆಗೆ ಮಣ್ಣನ್ನು ತುಂಬಿ ಅಡ್ಡಿಪಡಿಸಿರುವುದಿಲ್ಲ. ನನ್ನ ನಿಯೋಗಿ ಕಾರ್ಯ ಮಾಡುವ ಕಾಲಕ್ಕೆ ಪೈಪ್ ಎಲ್ಲಿ ಹಾದುಹೋಗಿರುತ್ತದೆ ಎಂಬ ಬಗ್ಗೆ ನಾನು ನೆಲವನ್ನು ಅಗೆದುನೋಡಿರುವುದಿಲ್ಲ. ಹಸಿರು ಬಣ್ಣದಲ್ಲಿ ಕಾಣುವ ಜಾಗ ಪ್ರತಿವಾದಿಯ ಸಂಪೂರ್ಣ ಹಿಡುವಳಿ ಜಾಗ ಇರುತ್ತದೆ ಎಂದರೆ ಸರಿ. ನಾನು ನಿಸಿ-9 ರಲ್ಲಿ 'ಬಿ' ಪಾಯಿಂಟ್ ನಿಂದ 'ಎಫ್' ಪಾಯಿಂಟ್ ವರೆಗೆ ರಸ್ತೆಯನ್ನು ತೋರಿಸಿರುತ್ತೇನೆ ಎಂದರೆ

ಸರಿ. ನಿಸಿ-9 ರಲ್ಲಿ ಸ.ನಂ.224 ರಿಂದ 157 ಕ್ಕೆ ರಸ್ತೆ ಇರುವ ಬಗ್ಗೆ ಏಕೆ ತೋರಿಸಿಲ್ಲ ಎಂದರೆ ಸಾಕ್ಷಿ ವಾದಿ ಅದನ್ನು ಒಪ್ಪಿಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2. ಸ.ನಂ.222 ರಲ್ಲಿ ಹಸಿರು ಬಣ್ಣದಿಂದ ತೋರಿಸಿರುವ ಜಾಗದಲ್ಲಿ ಪ್ರತಿವಾದಿ ಅಡಿಕೆ ಮತ್ತು ಬಾಳೇ ಬೆಳೆ ಹಾಗೂ ಖಾಲಿ ಜಾಗವನ್ನು ಬಿಟ್ಟುಕೊಟ್ಟಿರುತ್ತಾರೆ. ಸ.ನಂ.222 ರಿಂದ ವಾದಿಯ ಜಮೀನಿಗೆ ಸಂಪರ್ಕ ಕಲ್ಪಿಸುವ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಣ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನಗೆ PQR ಎಂದು ನಮೂದಿಸಿರುವ ರಸ್ತೆಯನ್ನು ಪ್ರತಿವಾದಿಯರು ತೋರಿಸಿರುತ್ತಾರೆ. ಪ್ರತಿವಾದಿ ಹೊಂದಿರುವ ಕಣ, ಮನೆ ಜಾಗ ಸ.ನಂ.222 ರಲ್ಲಿ ಸಹ ಬರುತ್ತದೆ ಎಂದರೆ ಸರಿ. ಪ್ರತಿವಾದಿ ನಿರ್ಮಿಸಿರುವ ಗೇಟು ಮತ್ತು ಉಣುಗೋಲು ತಮ್ಮ ಹಿಡುವಳಿ ಜಮೀನಿನಲ್ಲಿ ಹಾಕಿದ್ದು ಸರ್ಕಾರಿ ಸರ್ವೆ ನಂಬರ್ ನಲ್ಲಿ ಹಾಕಿರುವುದಿಲ್ಲ ಎಂದರೆ ಸರಿ. ನಾನು ಈಗ ಹೇಳಿದ ಸಂಗತಿಗಳನ್ನು ನನ್ನ ವರದಿಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ವಾದಿಯ ಮನೆ ಮುಖ್ಯ ರಸ್ತೆಯಲ್ಲಿ ಇರುವ ಬಗ್ಗೆ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಮುಖ್ಯ ರಸ್ತೆಯ ಪಕ್ಕ ಇರುವ ವಾದಿಯ ಮನೆ ಸರ್ಕಾರಿ ಸ.ನಂ.137 ರಲ್ಲಿ ಇರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ